ಅಕಾಡೆಮಿಗಳ ಪುನರ್‌ರಚನೆ ವಿಳಂಬವಾಗುತ್ತಿರುವ ಬಗ್ಗೆ

835 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಯುವಜನ ಸೇವಾ ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿವಿಧ ಅಕಾಡೆಮಿಗಳ ಪುನರ್‌ರಚನೆಯಲ್ಲಿ ತೀವ್ರವಾದ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಕಳೆದ ಎಷ್ಟು ತಿಂಗಳಿಂದ ವಿವಿಧ ಅಕಾಡೆಮಿಗಳನ್ನು ಪುನರ್‌ರಚಿಸಿರುವುದಿಲ್ಲ?*

ಇ) *ಅಕಾಡೆಮಿಗಳ ಪುನರ್‌ರಚನೆಯು ವಿಳಂಬವಾಗಲು ಕಾರಣಗಳೇನು?*

ಈ) *ಅಕಾಡೆಮಿಗಳನ್ನು ಪುನರ್‌ರಚನೆ ಮಾಡಲು ಯಾವುದಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆಯೇ*

ಉ) *ಹಾಗಿದ್ದಲ್ಲಿ ಆ ಕಾರ್ಯಕ್ರಮಗಳು ಯಾವುವು?*

ಶ್ರೀ ಎಸ್.ರಮೇಶ್ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು):

ಅ) ಬಂದಿದೆ.

ಆ) ಕಳೆದ 1-8-90 ರಿಂದ ರಚನೆಯಾಗಿಲ್ಲ.

ಇ) ಸಧ್ಯದಲ್ಲಿಯೇ ಪುನರ್‌ರಚಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಸದ್ಯದಲ್ಲಿಯೇ ಪುನರ್‌ರಚಿಸಲು ಕ್ರಮ ಕೈಗೊಳ್ಳಲಾಗುವುದು.

ಉ) ಸದ್ಯದಲ್ಲಿಯೇ ಪುನರ್‌ರಚಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿನ ನಕ್ಸಲಿಯ ಚಟುವಟಿಕೆಗಳನ್ನು ಹತ್ತಿಕ್ಕಲು ಕೈಗೊಂಡಿರುವ ಕ್ರಮದ ಬಗ್ಗೆ

837 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗೃಹ ಸಚಿವರು ಕೆಳಕಂಟ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ನಕ್ಸಲೀಯ ಚಟುವಟಿಕೆಗಳು ಕಂಡುಬಂದಿದೆ?*

ಆ) *ಈ ನಕ್ಸಲೀಯ ಚಟುವಟಿಕೆಯ ಹಾವಳಿಯನ್ನು ಹತ್ತಿಕ್ಕಲು ಯಾವುದಾದರೂ ಕಾರ್ಯಕ್ರಮಗಳನ್ನು ರೂಪಿಸಲಾಗಿದೆಯೇ?*

ಇ) *ರೂಪಿಸಿದ್ದಲ್ಲಿ ಆ ಕಾರ್ಯಕ್ರಮಗಳು ಯಾವುವು?*

ಈ) *ಈ ಚಟುವಟಿಕೆಗಳನ್ನು ಹತ್ತಿಕ್ಕಲು ವಿಶೇಷ ನಕ್ಸಲೀಯ ವಿರೋಧಿಗಳನ್ನು ರಚಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಶ್ರೀ ಧರ್ಮಸಿಂಗ್ (ಗೃಹಸಚಿವರು)

ಅ) ರಾಯಚೂರು ಗುಲ್ಬರ್ಗಾ, ಬಳ್ಳಾರಿ, ಮತ್ತು ತುಮಕೂರು.

ಆ) ಹೌದು.

ಇ) ರಾಜ್ಯದಲ್ಲಿ ನಕ್ಸಲೀಯರ ಹಾವಳಿಯನ್ನು ತಡೆಗಟ್ಟಲು ಸರ್ಕಾರವು ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿಗೆ ರೂ 157-50 ಲಕ್ಷ ರೂಪಾಯಿಗಳನ್ನು (93.5 ಲಕ್ಷ ರೂಗಳನ್ನು 1990-91 ಈ ಸಾಲಿಗೆ ಹಾಗೂ 64 ಲಕ್ಷ ರೂಗಳನ್ನು 1991-92ನೇ ಸಾಲಿಗೆ ಮತ್ತು ತುಮಕೂರು ಜಿಲ್ಲೆಯ ಪಾವಗಡ

ತಾಲ್ಲೂಕಿಗೆ 95 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ. ಈ ಯೋಜನೆಯ ಉದ್ದೇಶ ಬಡಜನರ ಜೀವನ ಮಟ್ಟವನ್ನು ಉತ್ತಮಗೊಳಿಸುವುದಾಗಿರುತ್ತದೆ.

ಈ) ಹೌದು.

ನೆಲಮಂಗಲ ತಾಲ್ಲೂಕಿನಲ್ಲಿ ನಡೆದಿರುವ ದರೋಡೆಗಳ ಬಗ್ಗೆ

838 - ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ಗೃಹಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ನೆಲಮಂಗಲ ತಾಲ್ಲೂಕಿನಲ್ಲಿ 1987ರಿಂದ 1990 ರವರೆಗೆ ಎಷ್ಟು ದರೋಡೆ ನಡೆದಿವೆ?*

ಹಾಗೂ ಇವುಗಳಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೇ?

ಆ) *ಈ ಪ್ರಕಣದಲ್ಲಿ ಸಾರ್ವಜನಿಕರು ಕಳೆದುಕೊಂಡಿರುವ ಹಣದ ಮತ್ತು ವಸ್ತುಗಳ ಮೌಲ್ಯದ ಮೊತ್ತ ಎಷ್ಟು?*

ಇ) *ದರೋಡೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುರ ಕ್ರಮಗಳೇನು?*

ಈ) *ನೆಲಮಂಗಲ ಟೌನ್‌ನಲ್ಲಿರುವ ಠಾಣೆಗೆ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಉ) *ಹಾಗಿದ್ದಲ್ಲಿ ಈ ಕೊರತೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು?*

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ)

	1987	1988	1989	1990
ದರೋಡೆ	2	2	4	-
ಡಕಾಯಿತಿ	2	-	5	1
ದರೋಡೆ	-	1	1	-
ಡಕಾಯಿತಿ	1	-	3	-

ಆ)

	ರೂ.	ರೂ.	ರೂ.	ರೂ.
ದರೋಡೆ	4080	4950	11100	-
ಡಕಾಯಿತಿ	63000	-	70500	-

ಇ) ದರೋಡೆ ಪ್ರಕರಣಗಳನ್ನು ತಡೆಗಟ್ಟಲು ಹಗಲು ಮತ್ತು ರಾತ್ರಿ ಗಸ್ತುಗಳನ್ನು ಕೈಗೊಳ್ಳಲಾಗುತ್ತಿದೆ. ಆಂಟಿ ಡಕಾಯಿತಿ ಸ್ಕ್ವಾಡ್‌ಗಳನ್ನು ರಚಿಸಲಾಗಿದೆ.

ಈ) ಹೌದು, ಬಂದಿದೆ.

ಉ) ನೆಲಮಂಗಲ ತಾಲ್ಲೂಕಿನಲ್ಲಿ ಗ್ರಾಮಾಂತರ ಪೋಲೀಸ್ ಠಾಣೆಯನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೀದರ್ ಜಿಲ್ಲೆಯಲ್ಲಿ ನಡೆದ ದರೋಡೆ ಮತ್ತು ಕೊಲೆಯ ಬಗ್ಗೆ

842 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಗೃಹಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) *ಬೀದರ್ ಜಿಲ್ಲೆಯಲ್ಲಿ ಮೇ 1989ರಿಂದ ಡಿಸೆಂಬರ್ 1990ರ ವರೆಗೆ ನಡೆದ ಕಳ್ಳತನ ದರೋಡೆ ಮತ್ತು ಕೊಲೆಯ ಪ್ರಕರಣಗಳು ಎಷ್ಟು?* ತಾಲ್ಲೂಕುವಾರು ವಿವರಗಳನ್ನು ಕೊಡುವುದು

ಆ) *ಇವುಗಳಲ್ಲಿ ಎಷ್ಟು ಪ್ರಕರಣಗಳು ಸಾಬೀತಾಗಿವೆ?*